ಸೆಳೆಯುವ ಸೂಚನೆಗಳನ್ನು ತರಬಹುದು ದೇಶದಲ್ಲಿ ಏನಾದರೂ ಅಂಥ ಅಲ್ಲೋಲ ಕಲ್ಲೋಲವಾಗುವಂಥ ಸಮಸ್ಯೆಗಳು ಬಂದರೆ, ನೋಟೀಸ್ ಕೊಡುವುದಕ್ಕೆ ಸಾಕಷ್ಟು ಕಾಲ ಇಲ್ಲದೆ ಹೋದರೆ ಅಂಥ ವಿಷಯಗಳನ್ನು ಇಲ್ಲಿ ಎತ್ತಬಹುದು. ಇಂಥ ವಿಷಯಗಳನ್ನು ಎತ್ತಿದರೆ ಉತ್ತರ ಬಯಸುವುದೂ ಸಾಧ್ಯವಿಲ್ಲ. ಉತ್ತರ ಕೊಡುವುದಕ್ಕೂ ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ:- ನಾನು ಒಂದು ಪ್ರಿವಿಲೇಜ್ ನೋಟೀಸ್ ಬರೆದು ಕಳುಹಿಸಿದ್ದೇನೆ. ಅದನ್ನು ದಯವಿಟ್ಟು ಹಕ್ಕುಚ್ಯುತಿ ಸಮಿತಿಗೆ ರೆಫರ್ ಮಾಡಬೇಕು ಸ್ವಾಮಿ.

ಅಧ್ಯಕ್ಷರು:- ಅದನ್ನು ಪರಿಶೀಲನೆ ಮಾಡುತ್ತೇನೆ.

7) ಕೆಮ್‌ಕೊ ಫ್ಯಾಕ್ಟರಿಯಲ್ಲಿ ಆದ ಅವ್ಯವಹಾರಕ್ಕೆ ಸಿ.ಬಿ.ಐ. ತನಿಖೆ.

ಶ್ರೀ ವಿನಯ್‌ಕುಮಾರ್ ಸೊರಕೆ:- ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧ ಪಟ್ಟ ಕೆಮ್‌ಕೊ ಚಾಕ್‌ಲೆಟ್ ಫ್ಯಾಕ್ಟರಿ, ಬೊಂಬಾಯಿಯಲ್ಲಿ i ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಅವ್ಯವಹಾರ ನಡೆದು ಅದರ ಮಟ್ಟಿಗೆ ಸಿ.ಬಿ.ಐ. ತನಿಖೆ ಆಗಬೇಕು ಎನ್ನುವ ರೀತಿಯಲ್ಲಿ ಅದರ ಆಡಳಿತ ಮಂಡಳಿಯವರೇ ನಿರ್ಧಾರ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರ ಮಟ್ಟಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಅದೇ ರೀತಿಯಾಗಿ ಇವತ್ತು ಶೇಕಡ 80ರಷ್ಟು ಷೇರ್ ಸರ್ಕಾರದವ್ದೇ ಇರುತ್ತದೆ.

ಅಧ್ಯಕ್ಷರು:- ಈಗ ನಿಮಗೆ ಸಿ.ಬಿ.ಐ. ಬೇಕೋ, ಸಿ.ಓ.ಡಿ. ಬೇಕೋ?

ಶ್ರೀ ವಿನಯಕುಮಾರ್ ಸೊರಕೆ :- ಸಿ.ಬಿ.ಐ.ನಿಂದ ತನಿಖೆಯಾಗಬೇಕು. ಇದು ಬೊಂಬಾಯಿಯಲ್ಲಿ ಆಗಿರುವುದು.

ಅಧ್ಯಕ್ಷರು:- ಓ, ಬೊಂಬಾಯಿಯಲ್ಲಿ ಆಗಿರುವುದು.

ಶ್ರೀ ವಿನಯ್‌ಕುಮಾರ್ ಸೊರಕೆ :- ಈಗ ಶೇಕಡ 80ರಷ್ಟು ಷೇರ್ ಸರ್ಕಾರದ್ದು ಇದೆ.

ಅಧ್ಯಕ್ಷರು:- ದಯವಿಟ್ಟು ಅದನ್ನು ಬರೆದು ಕಳುಹಿಸಿಕೊಡಿ.

8) ಅಧೀನಶಾಸನಸಮಿತಿಕಾರ್ಯದಿಂದಸದಸ್ಯರಚಾರಿತ್ರ್ಯವಧೆ,ರಕ್ಷಣೆಗೆ ಮನವಿ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೆ, ಸದಸ್ಯರ ಹಕ್ಕಿನ ರಕ್ಷಣೆಗೋಸ್ಕರ ತಮ್ಮಲ್ಲಿ ಹಲವಾರು ಬಾರಿ ಮೊರೆ ಇಟ್ಟಿದ್ದೇವೆ. ಈ ಸದನದ ಸದಸ್ಯ ಮುಕ್ತ ವಾತಾವರಣದಲ್ಲಿ ನಿರ್ಭೀತನಾಗಿ ಕೆಲಸ ಮಾಡುವುದಕ್ಕೆ ರಕ್ಷಣೆ ಕೊಡುವಂಥ ಗೌರವ ಪೀಠದಲ್ಲಿ ತಾವು ಇದ್ದೀರಿ. ತಮ್ಮಿಂದ ನಮ್ಮ ರಕ್ಷಣೆ ಆಗಬೇಕಾಗಿದೆ. ಸದನದ ಅಧೀನ ಶಾಸನ ಸಮಿತಿ ಮೇಲಿಂದ ಮೇಲೆ ಚಾರಿತ್ರ್ಯವಧೆ ಮಾಡುವಂತಹ ಕಾರ್ಯ ಮಾಡುತ್ತಾ ಇದೆ ಎನ್ನತಕ್ಕಂಥ ಸೂಚನೆಯನ್ನು ತಮಗೆ ಕೊಟ್ಟು ನಾನು ರಕ್ಷಣೆಯನ್ನು ಕೇಳುತ್ತಿದ್ದೇನೆ. ಹಲವಾರು ಬಾರಿ ತಮ್ಮಲ್ಲಿ ಮೊರೆ ಇಟ್ಟಿದ್ದೇನೆ. ಇದುವರೆಗೂ ನನ್ನ ಮೊರೆಗೆ ತಮ್ಮಿಂದ ಅನುಮತಿ ಸಿಗಬಹುದು ಎಂದು ನಿರೀಕ್ಷೆ ಮಾಡುತ್ತಿದ್ದೇನೆ. ದಯಮಾಡಿ ತಾವು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟು ಈ ಸದನದ ಸದಸ್ಯನಾದ ನಾನು ನಿರ್ಭೀತವಾಗಿ ಕೆಲಸ ಮಾಡುವುದಕ್ಕೆ, ನಿಷ್ಕಳಂಕವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಅದರ ಬಗ್ಗೆ ಗಮನಹರಿಸಿದ್ದೇನೆ. ಅದರ ಬಗ್ಗೆ ರೂಲಿಂಗ್ ಇವತ್ತು ತಯಾರಾದರೆ ಕೊಡುತ್ತೇನೆ. ಇಲ್ಲದಿದ್ದರೆ ಕೊನೆಯ ದಿವಸ ನಾಳೆ ಕೊಡುತ್ತೇನೆ.

ಶ್ರೀ ಬದ್ರಾಳಿ ಹಂಪನಗೌಡ:- ಮಾನ್ಯ ಅಧ್ಯಕ್ಷರೆ, ಹುಟ್ಟುವಳಿ ಮಾರಾಟ ಸಹಕಾರ

ಸಂಘದಲ್ಲಿ 8 ಲಕ್ಷ ರೂಪಾಯಿಗಳ ಅವ್ಯವಹಾರ ಆದ ಬಗ್ಗೆ ನಾನು ತಮ್ಮಲ್ಲಿ ವಿನಂತಿಸಿಕೊಂಡಿದ್ದೆ.

ಅಧ್ಯಕ್ಷರು:- ಅದನ್ನು ಬರೆದು ಕಳುಹಿಸಿ.

9) ಸಿಂಧನೂರು ತಾಲ್ಲೂಕು ಸಹಕಾರ ಸಂಘಕ್ಕೆ ಸೇರಿದ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಯೂನಿಟ್‌ಗಳನ್ನು ವ್ಯಾಪಾರಸ್ಥರಿಗೆ ಗುತ್ತಿಗೆ ಕೊಡುವ ಪ್ರಸ್ತಾವನೆ.

ಶ್ರೀ ಬದ್ರಾಳಿ ಹಂಪನಗೌಡ:- ನಾನು ಬರೆದು ಕಳುಹಿಸಿದ್ದೇನೆ. ಮೊನ್ನೆ ಶನಿವಾರದ ದಿನವೇ ಕೊಟ್ಟಿದ್ದೇನೆ. ಈಗ ಇದರಲ್ಲಿ ತಾಲ್ಲೂಕು ಸಹಕಾರ ಹುಟ್ಟುವಳಿ ಸಂಘದ ಆಡಿಯಲ್ಲಿ ಎರಡು ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಯೂನಿಟ್ ಇವೆ. ಈಗ ಪ್ರೆಸ್ಸಿಂಗ್ ಮತ್ತು ಜಿನ್ನಿಂಗ್ ಯೂನಿಟ್ ಅನ್ನು ಗುತ್ತಿಗೆಯ ಆಧಾರದ ಮೇಲೆ ಕೊಡಬೇಕು; ಎಂದು ಹೇಳಿ ಅಲ್ಲಿ ವ್ಯಾಪಾರಸ್ಥರ ಕಡೆಯಿಂದ 8 ಲಕ್ಷ ರೂಪಾಯಿಗಳ ಅಡ್ವಾನ್ಸ್ ತೆಗೆದುಕೊಂಡು ಗುತ್ತಿಗೆಯ ಆಧಾರದ ಮೇಲೆ ನೀಡಬೇಕೆಂದು ಒಂದು ಪ್ರಸ್ತಾವನೆಯನ್ನು ಇಲಾಖೆಗೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಕಳುಹಿಸಿಕೊಡುವಾಗ ಏನಾಗಿದೆ ಎಂದರೆ, ದಿನ ಪತ್ರಿಕೆಯಲ್ಲಿ ಪ್ರಕಟಣೆಯಾಗಿ ಇಲಾಖೆಗೆ ಕಳುಹಿಸಿದ್ದು ಒಂದು, ಪ್ರತಿನಿತ್ಯ ಸರ್‌ಕ್ಯೂಲೆಟ್ ಆಗಿದ್ದು ಒಂದು. ಈ ಎರಡು ಪತ್ರಿಕೆಗಳು ನನ್ನ ಬಳಯಲ್ಲಿ ಇವೆ. ಮತ್ತು ಆ ಪ್ರಸ್ತಾವನೆ ಏನಾಗಿದೆ ಎಂದರೆ, ...

ಅಧ್ಯಕ್ಷರು:- ಅದನ್ನೆಲ್ಲಾ ಕೋ-ಆಪರೇಷನ್ ಮಿನಿಸ್ಟರ್‌ಗೆ ಕಳುಹಿಸಿಕೊಡಿ. ಅದನ್ನು ಅವರು ನೋಡುತ್ತಾರೆ.

ಶ್ರೀ ಬದ್ರಾಳಿ ಹಂಪನಗೌಡ:- ಆಯಿತು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ:- ಸನ್ಮಾನ್ಯ ಅಧ್ಯಕ್ಷರೆ, ಶ್ರೀಮತಿ ಮೋಟಮ್ಮನವರು, ನಾನು ಮತ್ತಿತರರು ಗಮನ ಸೆಳೆಯುವ ಸೂಚನೆ ಕಳುಹಿಸಿ 8-10 ದಿವಸಗಳ ಮೇಲಾಗಿದೆ. ಅದು ಏನೆಂದರೆ ರಾಜ್ಯದ ಇಲಾಖೆಗಳಲ್ಲಿ ಮೀಸಲಾತಿಯ ಬಗ್ಗೆ ಕಳುಹಿಸಿದ್ದುದು. ಅದು ಇವತ್ತಿನವರೆಗೂ ಬರಲಿಲ್ಲ. ನಾನು 4-5 ದಿವಸಗಳ ಹಿಂದೆ ನಮ್ಮ ಗಮನ ಸೆಳೆಯುವ ಸೂಚನೆ ಬರಬೇಕು ಎಂದು ಸೆಕ್ರೆಟರಿಯವರಿಗೆ ಕಾಗದ ಬರೆದಿದ್ದೆ. ಅದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ನಾಳೆ ತೆಗೆದುಕೊಳ್ಳೋಣ.

ಶ್ರೀಮತಿ ಮೋಟಮ್ಮ:- ನಾವು 6 ಜನ ಸದಸ್ಯರು ಸೂಚನೆ ಕಳಿಸಿದ್ದೇವೆ.

ಅಧ್ಯಕ್ಷರು:- ಆಗಬಹುದು.

11.40 ಎ.ಎಂ.

ಶ್ರೀ ಎನ್. ಚಿಕ್ಕೇಗೌಡ:- ಮಾನ್ಯ ಅಧ್ಯಕ್ಷರೇ ನಾನು ಅತೀ ಮುಖ್ಯವಾದ ಒಂದು ವಿಚಾರದಲ್ಲಿ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟು 8-10 ದಿವಸ ಆಗಿದೆ. ಎಲ್ಲರದ್ದೂ ಬರುತ್ತಾ ಇದೆ ಆದರೆ ನಾನು ಕಳುಹಿಸಿದ್ದ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಹಾಗೆ ತಾವು ಆದೇಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಸಿ. ಬೈರೇಗೌಡ:- ನಿನ್ನೆ ದಿವಸ ತಮ್ಮ ಗಮನಕ್ಕೆ ಮತ್ತು ಸಭೆಯ ಗಮನಕ್ಕೆ ಒಂದು ವಿಷಯವನ್ನು ತಂದಿದ್ದೆ. ಏನೆಂದರೆ ರಾಷ್ಟ್ರ ಮಟ್ಟದಲ್ಲಿ ವಿದ್ಯುಚ್ಛಕ್ತಿ ಸಚಿವರ ಸಮ್ಮೇಳನ ದೆಹಲಿಯಲ್ಲಿ ನಡೆದಿದೆ. ಅಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ.....

ಅಧ್ಯಕ್ಷರು:- ಈ ವಿಚಾರವನ್ನು ನಾಳೆ ಚೀಫ್ ಮಿನಿಸ್ಟರ್ ಇರುವಾಗ ರೈಸ್ ಮಾಡಿ.